# ಬೆನ್ನು ತಟ್ಟುವ ಹೊಸ ಮಾರ್ಕೆಟಿಂಗ್

ಚಿತ್ರರಂಗದ ಮಾರ್ಕೆಟಿಂಗ್ ತಂತ್ರಗಳು ಹೊಸಕಾಲದಲ್ಲಿ ವ್ಯಾಪಕವಾಗಿ ಬದಲಾಗುತ್ತಿವೆ. 'ಟಾಕ್ಸಿಕ್' ಸಿನಿಮಾದ ನಾಯಕನ ಹೆಸರು ರಾಯ. ಆತನನ್ನು ಪರಿಚಯಿಸುವ ಪುಟ್ಟ ವಿಡಿಯೊ ಈಗ ಸಾಮಾಜಿಕ ಮಾಧ್ಯಮದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿರುವುದು ಇದಕ್ಕೆ ಒಂದು ಉದಾಹರಣೆ. ಹೇಗಾದರೂ ಸರಿ, ಪ್ರೇಕ್ಷಕರು ಮಾತಾಡುವಂತೆ ಮಾಡುವ ಕೆಣಕುವ ಶೈಲಿಯ ವಿಡಿಯೊ ಇದು.



ಇನ್ನೂ ಶಿಷ್ಟ ಭಾಷೆಯಲ್ಲಿ ಹೇಳುವುದಾದರೆ ಪ್ರಚೋದನಕಾರಿ. ಕೆಲವು ವರ್ಷಗಳ ಹಿಂದೆ ಸಿನಿಮಾದ ಹೂರಣವನ್ನು ವಿಪರೀತ ಗುಟ್ಟಾಗಿ ಇಡುತ್ತಿದ್ದರು. ನಾಯಕನ ಪಾತ್ರ ಏನು ಎಂದೂ ಹೇಳಲು ಹಿಂಜರಿಕೆ ಇತ್ತು. ಈಗ ಸಿನಿಮಾಗಳು ಮೂಲ ಚರ್ಚೆಯ ಹಂತದಲ್ಲಿ ಇರುವಾಗಲೇ ಸುದ್ದಿಗಳು ರೆಕ್ಕೆ ಪುಕ್ಕ ಹಚ್ಚಿಕೊಳ್ಳುತ್ತವೆ. ಇದು ಸಹಜವಾಗಿ ಆಗುತ್ತದೆ ಎನ್ನುವುದಕ್ಕಿಂತ ಹಾಗೆ ಸುದ್ದಿ ಆಗುವಂತೆ ಮಾರ್ಕೆಟಿಂಗ್ ಮಾಡಲಾಗುತ್ತದೆ ಎನ್ನುವುದೇ ಸತ್ಯ.

'ಪುಷ್ಪ' ಸರಣಿ ಚಿತ್ರಗಳನ್ನು ನಿರ್ದೇಶಿಸಿ, ಭಾರತೀಯ ಚಿತ್ರರಂಗದಲ್ಲಿ ಛಾಪು ಮೂಡಿಸಿರುವ ನಿರ್ದೇಶಕ ಸುಕುಮಾರ್ ಮುಂದೆ ರಾಮ್ ಚರಣ್ ನಾಯಕತ್ವದಲ್ಲಿ ಚಿತ್ರ ಮಾಡಲಿದ್ದಾರೆ ಎನ್ನುವುದು ಈಗ ಹರಿದಾಡುತ್ತಿರುವ ಸುದ್ದಿ.

'ಈ ಚಿತ್ರದಲ್ಲಿ ನಾಯಕನನ್ನು ಪರಿಚಯಿಸುವ ದೃಶ್ಯವೊಂದು ಇದೆ. ಅದು ಮೈ ನವಿರೇಳಿಸುವಷ್ಟು ಅದ್ಭುತವಾಗಿದೆ. ಆ ದೃಶ್ಯದ ಹೂರಣ ಏನು ಎಂಬುದು ಗುಟ್ಟು. ರಾಮ್ ಚರಣ್ ಅದನ್ನು ಹೇಳಿದಾಗಲೇ ಅಬ್ಬಾ ಎಂಬ ಭಾವನೆ ಮೂಡಿತು. ಆ ಚಿತ್ರಕ್ಕಾಗಿ ನಾನೂ ಎದುರು ನೋಡುತ್ತಿರುವೆ' ಎಂದು ನಿರ್ದೇಶಕ ರಾಜಮೌಳಿ ಪ್ರತಿಕ್ರಿಯಿಸಿದ್ದಾರೆ. ಒಬ್ಬ ದಿಗ್ಗಜ ನಿರ್ದೇಶಕನನ್ನು ಇನ್ನೊಬ್ಬ ಜನಪ್ರಿಯ ನಿರ್ದೇಶಕ ಈ ರೀತಿ ಹೊಗಳುವುದು ಕೂಡ ಮಾರ್ಕೆಟಿಂಗ್ ಭಾಗವೇ ಆಗಿದೆ.

ಯಶ್ ಚಿತ್ರದ ಟೀಸರ್ ಕುರಿತು ನಿರ್ದೇಶಕ ಸಂದೀಪ್ ರೆಡ್ಡಿ ವಂಗಾ ಹೊಗಳಿರುವುದು ಈಗ ವರದಾನವೇ ಆಗಿದೆ. ಎಷ್ಟರ ಮಟ್ಟಿಗೆ ಎಂದರೆ, ಯಶ್ ಇದೇ ನಿರ್ದೇಶಕರ ಸಿನಿಮಾದಲ್ಲಿ ನಟಿಸಲಿದ್ದಾರೆ ಎಂಬ ಪುಕಾರು ಎದ್ದಿದೆ. ಆ ಸಂಗತಿಯನ್ನು ಸಂದೀಪ್ ಆಗಲೀ, ಯಶ್ ಆಗಲೀ ದೃಢಪಡಿಸಿಲ್ಲ.

ಗಾಯಗೊಂಡ ಪ್ರಭಾಸ್ ಮೈತುಂಬಾ ಒಸರುವ ನೆತ್ತರು ಇರುವ ಇನ್ನೊಂದು ಟೀಸರ್ ಇತ್ತೀಚೆಗೆ ಹೊರಬಿದ್ದಿತು. ಅದು 'ಸ್ಪಿರಿಟ್' ಸಿನಿಮಾ ಪ್ರಚಾರದ ಮೊದಲ ಅಧ್ಯಾಯ. ಸಂದೀಪ್ ಈ ಚಿತ್ರವನ್ನು ನಿರ್ದೇಶಿಸಿದ್ದು, 'ದಿ ರಾಜಾ ಸಾಬ್' ಸೋಲಿನಿಂದ ಹೊರಬರಲು ಪ್ರಭಾಸ್‌ಗೆ ಮುಖ್ಯವಾದ ಸಿನಿಮಾ ಇದು ಎಂದು ವಿಶ್ಲೇಷಿಸಲಾಗುತ್ತಿದೆ. ■

# ಆಮೀರ್ ಅನುಕರಣೆಯ ಸೊಗಸು



ಕಪಿಲ್ ಶರ್ಮ ಹಾಸ್ಯ ಕಾರ್ಯಕ್ರಮದ ಕೇಂದ್ರ ಬಿಂದು ಸುನಿಲ್ ಗ್ರೋವರ್. ಅವರು ಸಲ್ಮಾನ್ ಖಾನ್, ಶಾರುಕ್ ಖಾನ್, ಅಜಯ್ ದೇವಗನ್, ಗುಲ್ಜಾರ್ ಎಲ್ಲರ ರೀತಿ ವೇಷಭೂಷಣ ಧರಿಸಿ, ಅವರ ಮಾತಿನ ಶೈಲಿ, ಆಂಗಿಕ ಚಲನೆಯನ್ನು ಅನುಸರಿಸಿ ಜನಪ್ರಿಯರಾಗಿದ್ದಾರೆ. ಹಾಸ್ಯ ಚಟಾಕಿ ಹಾರಿಸುವುದರಲ್ಲಿ ಅವರ ಸಮಯಪ್ರಜ್ಞೆಗೂ ಸಾಟಿಯಿಲ್ಲ.



ಅವರು ಇತ್ತೀಚೆಗೆ ಆಮೀರ್ ಖಾನ್ ಅವರನ್ನೂ ಅನುಕರಿಸಿದರು. ಆಮೀರ್ ಇತ್ತೀಚೆಗೆ ಮೀಸೆ ಬಿಟ್ಟು, ಅದನ್ನು ತುಸು ಮೇಲಕ್ಕೆ ಎತ್ತಿಕೊಂಡಿರುವ ರೀತಿಯ ಗೆಟಪಿನಲ್ಲಿ ಸುನಿಲ್ ಕಾರ್ಯಕ್ರಮದಲ್ಲಿ ಕಾಣಿಸಿಕೊಂಡರು. ಮಾತಿನ ಶೈಲಿ ಹಾಗೂ ಶಾರೀರದ ಅನುಕರಣೆಯಲ್ಲಂತೂ ಅವರು ಥೇಟ್ ಆಮೀರ್ ಖಾನ್ ಎಂಬಂತೆಯೇ ಇದ್ದರು. ಅವರ ಈ ಸಹಜ ಮಿಮಿಕ್ರಿ ಕಂಡು ಖುದ್ದು ಆಮೀರ್ ಕೂಡ ಫಿದಾ ಆಗಿದ್ದಾರೆ. ತಮ್ಮನ್ನು ತಾವೇ ಕಂಡಂತಹ ಅನುಭವ ಆಗಿದೆ ಎಂದಿದ್ದಾರೆ.

ಈ ವಿದ್ಯಮಾನವು ಇಷ್ಟಕ್ಕೇ ಕೊನೆಗೊಂಡಿಲ್ಲ. ಆಮೀರ್ ಖಾನ್ ಅವರೀಗ 'ಹ್ಯಾಪಿ ಪಟೇಲ್' ಎಂಬ ಸಿನಿಮಾ ನಿರ್ಮಿಸಿದ್ದಾರೆ. ಹಾಸ್ಯಗಾರ ವೀರ್ ದಾಸ್ ಆ ಚಿತ್ರವನ್ನು ನಿರ್ದೇಶಿಸಿರುವುದೇ ಅಲ್ಲದೆ ಮುಖ್ಯ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಆ ಸಿನಿಮಾದ ಪ್ರಚಾರದ ವಿಡಿಯೊ ಬಿಡುಗಡೆಯಾಗಿದ್ದು, ಗಮನಸೆಳೆಯುವಂತಿದೆ. ವೀರ್ ದಾಸ್ ಅವರು ಆಮೀರ್ ಗೆಟಪಿನಲ್ಲಿ ಇರುವ ಸುನಿಲ್ ಗ್ರೋವರ್ ಅವರನ್ನು ನೋಡುತ್ತಾರೆ. ಅವರೇ ಸಾಕ್ಷಾತ್ ಆಮೀರ್ ಎಂದು ನಂಬಿಬಿಡುತ್ತಾರೆ. ಸಾಮಾನ್ಯವಾಗಿ ಆಮೀರ್ ಕಟುವಾಗಿ ಪ್ರತಿಕ್ರಿಯೆ ನೀಡುವುದನ್ನು ವೀರ್ ಕಂಡಿದ್ದಾರೆ. ಆದರೆ, ಅವರ ವೇಷದಲ್ಲಿನ ಸುನಿಲ್ ಮೆಚ್ಚುಗೆಯ ಮಹಾಪೂರವನ್ನೇ ಹರಿಸಿ, ಖುಷಿಯಲ್ಲಿ ಚೆಕ್‌ಗಳನ್ನು ನೀಡಲು ಆರಂಭಿಸುತ್ತಾರೆ. ಅದೇ ಹೊತ್ತಿಗೆ ಆಮೀರ್ ಅಲ್ಲಿಗೆ ಬರುತ್ತಾರೆ. ಆಗಲೂ ವೀರ್, ನಕಲಿ ಆಮೀರ್ ಅವರನ್ನೇ ಅಸಲಿ ಎಂದುಕೊಂಡು ಮಾತಾಡುವುದನ್ನು ಮುಂದುವರಿಸುತ್ತಾರೆ. ಪ್ರಚಾರದ ತಂತ್ರವೂ ಹೀಗೆ ದಿನದಿಂದ ದಿನಕ್ಕೆ ಹೊಸತನ ಮೈಗೂಡಿಸಿಕೊಳ್ಳುತ್ತಿದೆ. ■

